1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ: 484 : 2015**

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿಗಳು :
1. ಕೆಂಪರಾಜನಾಯ್ಕ ಬಿನ್ ಬಸವರಾಜನಾಯಕ , 30 ವರ್ಷ
2. ಕೆ.ಬಿ.ನಾಗೇಂದ್ರ ಬಿನ್ ಬಂಗಾರನಾಯಕ 20 ವರ್ಷ
3. ರಮೇಶ ಉಃ ರಾಜೇಶ ಬಿನ್ ಚಿಕ್ಕಸಿದ್ದನಾಯಕ ಉಃ ಸಿದ್ದನಾಯ್ಕ , 30 ವರ್ಷ
4. ಚಂದ್ರ ಉಃ ಚಂದ್ರಶೇಖರ ಬಿನ್ ಶಿವಣ್ಣನಾಯ್ಕ 21 ವರ್ಷ
5. ಕೆಂಚನಾಯ್ಕ ಬಿನ್ ಬಸವನಾಯ್ಕ 38 ವರ್ಷ
6. ಮೂರ್ತಿ ಬಿನ್ ಬಸವನಾಯ್ಕ , 35 ವರ್ಷ

ಎಲ್ಲರೂ ವಾಸಃ ಕಾರ್ಯ ಗ್ರಾಮ , ನಂಜನಗೂಡು ತಾಲೂಕು

## ದೋಷಾರೋಪಣೆ

ಸಂದೀಪ್ ಎ. ನಾಯಿಕ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾವು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿಃ 20.2.2014 ರಂದು ರಾತ್ರಿ 9.45 ಗಂಟೆ ಸಮಯದಲ್ಲಿ ಕವಲಂದೆ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಕಾರ್ಯ ಗ್ರಾಮದ ಬಸ್ ಸ್ಟಾಂಡ್ ಹತ್ತಿರ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು , 1 ರಿಂದ 3ನೇ ಆರೋಪಿಗಳು ಸಾಕ್ಷಿ 1 ರವರನ್ನು , 6ನೇ ಆರೋಪಿ ಸಾಕ್ಷಿ 5ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಅವಮಾನವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1ನೇ ಆರೋಪಿ ಸಾಕ್ಷಿ 1ರವರನ್ನು ತಬ್ಬಿ ಹಿಡಿದುಕೊಂಡು ಅಕ್ರಮ ತಡೆಯುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಮೂರನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 2ನೇ ಆರೋಪಿ ಕೈಯಿಂದ ಸಾಕ್ಷಿ 1ರವರ ಬೆನ್ನು , ಎದೆ , ಕತ್ತಿಗೆ ಹೊಡೆದು , 4ನೇ ಆರೋಪಿ ಕೈಯಿಂದ ಸಾಕ್ಷಿ 5ರವರನ್ನು ಹಿಡಿದುಕೊಂಡು , 5ನೇ ಆರೋಪಿ ಕೈಯಿಂದ ಸಾಕ್ಷಿ 5ರವರ ಎಡಕಣ್ಣಿನ ಹತ್ತಿರ ಗೀರಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ ಭಾರತ

ದಂಡ ಸಂಹಿತೆಯ ಕಲಂ 323 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ನಾಲ್ಕನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 3ನೇ ಆರೋಪಿ ದೊಣ್ಣೆಯಿಂದ ಸಾಕ್ಷಿ 1ರವರ ಎಡಕಾಲಿನ ಮಂಡಿ ಕೆಳಗೆ ಹೊಡೆದು , 6ನೇ ಆರೋಪಿ ಕಲ್ಲಿನಿಂದ ಸಾಕ್ಷಿ 5ರವರ ಎಡಕಣ್ಣಿನ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ಗಾಯನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಐದನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1 ಮತ್ತು 2ನೇ ಆರೋಪಿಗಳು ಸಾಕ್ಷಿ 1ರವರ ಬಾಬ್ತು ಕೆಎ 01-ಎಎ-311 ಸಂಖ್ಯೆಯ ಕಾರನ ಗ್ಲಾಸನ್ನು ಕಲ್ಲಿನಿಂದ ಗುದ್ದಿ ಒಡದೆ ಹಾಕಿ ಸುಮಾರು ರೂ. 5000/-ನಷ್ಟವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 427 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸಹಿ/-

ದಿನಾಂಕಃ 10.8.2016 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ಸ್ಥಳ ಃ ನಂಜನಗೂಡು ನಂಜನಗೂಡು